ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಕಡತ ಸಂಖ್ಯೆ: DHS/SSUCovid-19/17/2019-20

02-04-2020

**ಸುತ್ತೋಲೆ**

ವಿಷಯ: ಕೋವಿಡ್-19 ಸಾಂಕ್ರಮಿಕ ರೋಗ ನಿಯಂತ್ರಣ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳಿಗೆ ಕೋವಿಡ್ ಸೋಂಕು ತಗುಲಿದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಅನುಸರಿಸಬೇಕಾದ ಕಾರ್ಯವಿಧಾನದ ಬಗ್ಗೆ ಮಾರ್ಗಸೂಚಿ (ಎಸ್.ಓ.ಪಿ)

---

ಕೋವಿಡ್-19 ಪಿಡುಗನ್ನು ನಿಯಂತ್ರಿಸಿ ನಿರ್ಬಂಧಿಸುವಲ್ಲಿ ಯೋಜನೆ, ಸಮನ್ವಯತೆ ಮತ್ತು ನಿರ್ಧಾರ ಕೈಗೊಳ್ಳುವ ಕಾರ್ಯದಲ್ಲಿ ನಾನಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ನಗರಪಾಲಿಕೆ ಆಯುಕ್ತರು/ಪೊಲೀಸ್ ವರಿಷ್ಠಾಧಿಕಾರಿ, ನಗರ ಪೊಲೀಸ್ ಆಯುಕ್ತರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ವೈದ್ಯಕೀಯ ಕಾಲೇಜಿನ ಡೀನ್, ಜಿಲ್ಲಾ ಸರ್ಜನ್ ಮತ್ತಿತರ ಅಧಿಕಾರಿಗಳು ಸೇರಿದಂತೆ ಹಿರಿಯ ಅಧಿಕಾರಿಗಳು ತೊಡಗಿಸಿಕೊಂಡಿರುತ್ತಾರೆ.

ಪ್ರಸ್ತಾಪಿಸಲಾಗಿರುವ ಅಧಿಕಾರಿಗಳಲ್ಲಿ ಕೆಲವರಿಗಾದರೂ ಕರ್ತವ್ಯ ನಿರತರಾಗಿರುವ ಸಂದರ್ಭದಲ್ಲಿ ವೈರಸ್ ಸೋಂಕಿತರ ಸಂಪರ್ಕಕ್ಕೆ ಬಂದು ಸ್ವತಃ ಸೋಂಕಿಗೆ ಈಡಾಗುವ ಕ್ಷೀಣ ಸಾಧ್ಯತೆಗಳಿರುತ್ತವೆ. ಅಂತಹ ಸಂದರ್ಭದಲ್ಲಿ ಸರ್ಕಾರವು ಸೋಂಕು ಬಾಧಿತ ಅಧಿಕಾರಿಯನ್ನು ವರ್ಗಾವಣೆ ಮಾಡಿ ಇನ್ನೊಬ್ಬ ಅಧಿಕಾರಿಯನ್ನು ನೇಮಕ ಮಾಡಬಹುದಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಹೊಸಬರ ಆಗಮನದಿಂದ ಈಗಾಗಲೇ ಕೈಗೊಳ್ಳಲಾಗಿರುವ ನಿಯಂತ್ರಣ ಕಾರ್ಯಗಳಲ್ಲಿ ತಡೆರಹಿತ ಅನುಷ್ಠಾನಕ್ಕೆ ಅಡಚಣೆಯಾಗುವ ಸಂಭವವಿರುತ್ತದೆ. ಅದನ್ನು ತಪ್ಪಿಸಲು ನಿರ್ಣಾಯಕವಾಗಿ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳ ಮುಂದುವರಿಕೆ ಭರವಸೆಯಿಂದ ಕ್ವಾರಂಟೈನ್.ನಲ್ಲಿರುವ ಲಘು ಸೋಂಕಿತ ಅಧಿಕಾರಿಗಳ ಸೇವೆ, ಸಾಮರ್ಥ್ಯ, ಜ್ಞಾನ ಮತ್ತು ಪರಿಸ್ಥಿತಿಯ ಅನುಭವವನ್ನು ಬಳಸಿಕೊಳ್ಳುವುದು ಹೊಸದಾಗಿ ಬಂದಿರುವ ಅಧಿಕಾರಿಗೆ ಅವಶ್ಯಕ ಮತ್ತು ಅಪೇಕ್ಷಣೀಯವಾಗಿದೆ

**ಪಾಸಿಟಿವ್ ಎಂದು ಸಾಬೀತಾದ ಬಳಿಕ ಲಘು ಸೋಂಕಿಗೆ ಒಳಗಾದ ಪ್ರಕರಣದಲ್ಲಿ:**

1. ಜಿಲ್ಲಾ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳುವ/ಯೋಜನೆ ರೂಪಿಸುವ ನಿರ್ಣಾಯಕ ಹಂತದಲ್ಲಿ (ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಗುರುತಿಸಬೇಕು) ಇವರ ಅಧಿಕಾರಿ ಕೋವಿಡ್-19 ಪಾಸಿಟಿವ್ ಎಂದು ಸಾಬೀತಾಗಿ ಲಘು ಸೋಂಕಿಗೆ ಒಳಗಾಗಿದ್ದ ಸಂದರ್ಭದಲ್ಲಿ, ಅಂತಹ ಅಧಿಕಾರಿಯನ್ನು ಸರ್ಕಾರಿ ಕಟ್ಟಡದಲ್ಲಿ (ಸರ್ಕಾರಿ ಅತಿಥಿ ಗೃಹ ಅಥವಾ ಇನ್ಯಾವುದೇ ಪ್ರತ್ಯೇಕ ಕಟ್ಟಡದಲ್ಲಿ) ಕ್ವಾರಂಟೇನ್ ಗೆ ಒಳಪಡಿಸಬೇಕು ಮತ್ತು ಅವರಿಗೆ ಫೋನ್ ಮತ್ತು ಇಂಟರ್ನೆಟ್ ಸಂಪರ್ಕವನ್ನು ಕಲ್ಪಿಸಬೇಕು. ಇದು ಜಿಲ್ಲಾ ಮಟ್ಟದ ತಂಡದಲ್ಲಿ ಕಾರ್ಯನಿರ್ವಹಿಸುವ ಇತರರಿಗೆ ಸಂಪರ್ಕಿಸಲು ಮತ್ತು ಅವರಿಗೆ ಸಹಾಯ ಮಾಡಲು ಮತ್ತು ಮೇಲ್ವಿಚಾರಣೆ (ಸೋಂಕಿತರಲ್ಲದ ವ್ಯಕ್ತಿಗಳ ಜೊತೆ ಸಂಪರ್ಕವಿಲ್ಲದೆ) ನಡೆಸಲು ಅನುಕೂಲವಾಗಲಿದೆ.
2. ಈ ಕ್ವಾರಂಟೇನ್ ಕೇಂದ್ರದಲ್ಲಿ ಉಳಿದ ಎಲ್ಲ ಎಸ್.ಐ.ಸಿ/ಎಸ್.ಕ್ಯೂ.ಸಿ ನಿಯಮಾವಳಿಗಳನ್ನು ಅನುಸರಿಸಬೇಕು.
3. ಒಟ್ಟಾರೆ ಪರಿಸ್ಥಿತಿಯ ನಿಯಂತ್ರಣದಲ್ಲಿ ಯಾವುದೇ ಗೊಂದಲವಾಗುವುದನ್ನು ತಪ್ಪಿಸಲು ಹೊಸದಾಗಿ ನೇಮಕವಾದ ಅಧಿಕಾರಿಯು ಕ್ವಾರಂಟೇನ್ ನಲ್ಲಿ ಇರುವ ಅಧಿಕಾರಿಯ ಜೊತೆಗೆ ಸಮನ್ವಯ ಸಾಧಿಸಲು ಸೂಚಿಸಲಾಗಿದೆ.

2.4

---

3ನೇ ಮಹಡಿ, ಐಪಿಪಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು - 560 009.

4. ಈ ಅಧಿಕಾರಿಯ ಕುಟುಂಬದ ಸದಸ್ಯರು ಅಧಿಕಾರಿಯ ಜೊತೆಗೆ ವಾಸಿಸುತ್ತಿದ್ದು ಪಾಸಿಟಿವ್ ಎಂದು ಸಾಬೀತಾಗಿದ್ದರೆ ಅವರನ್ನೂ ಹೋಮ್ ಕ್ವಾರಂಟೀನ್ ನಲ್ಲಿ ಇರಿಸಬೇಕು.
5. ಒಂದು ವೇಳೆ ಅಧಿಕಾರಿಯು ಪ್ರತ್ಯೇಕವಾಗಿದ್ದು ಕೆಲಸ ಮಾಡುತ್ತಿದ್ದರೆ ಅವರು ಸ್ರದ್ಯ ಇರುವ ನಿವಾಸದಲ್ಲಿಯೇ ಕ್ವಾರಂಟೀನ್ ನಲ್ಲಿ ಮುಂದುವರಿಯಬೇಕು ಮತ್ತು ಅವರ ಪರೀಕ್ಷಾ ಮಾದರಿ ನೆಗೆಟಿವ್ ಎಂದು ಸಾಬೀತಾಗಿ ಅವರನ್ನು ನೋಡಿಕೊಳ್ಳುತ್ತಿರುವ ವೈದ್ಯರು ಅನುಮತಿ ನೀಡುವ ತನಕ ಆತ/ಆಕೆಯನ್ನು ಭೇಟಿ ಮಾಡಲು ಅವರ ಕುಟುಂಬ ಸದಸ್ಯರಿಗೆ ಅವಕಾಶ ನೀಡುವಂತಿಲ್ಲ.

**ಒಂದು ವೇಳೆ ತೀವ್ರ ಸೋಂಕಿಗೆ ಒಳಗಾಗಿದ್ದು ಆಸ್ಪತ್ರೆಗೆ ದಾಖಲಾಗಬೇಕಾದ ಅಗತ್ಯವಿದ್ದರೆ:**

1. ಅಂತಹ ಅಧಿಕಾರಿಯನ್ನು ಹೋಮ್ ಕ್ವಾರಂಟೀನ್ ನಿಂದ ಆಸ್ಪತ್ರೆಯ ಕ್ವಾರಂಟೀನ್ ಗೆ ಸ್ಥಳಾಂತರಿಸಬೇಕು ಮತ್ತು ಶಿಷ್ಟಾಚಾರದಂತೆ ಪರೀಕ್ಷೆಗೆ ಒಳಪಡಿಸಬೇಕು.
2. ಇಂತಹ ಸನ್ನಿವೇಶದಲ್ಲಿ ಬದಲಿ ನೇಮಕವಾದ ಅಧಿಕಾರಿಯು ಕೋವಿಡ್-19 ಸಾಂಕ್ರಾಮಿಕದ ನಿಯಂತ್ರಣಕ್ಕೆ ಪರಿಸ್ಥಿತಿಯ ಮೇಲೆ ಸಂಪೂರ್ಣ ಹತೋಟಿಯನ್ನು ಸಾಧಿಸಬೇಕು.

2.4.20

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಇವರಿಗೆ:

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
2. ಎಲ್ಲಾ ನಗರ ಪೊಲೀಸ್ ಆಯುಕ್ತರು
3. ಎಲ್ಲಾ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳು
4. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
5. ಎಲ್ಲಾ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಡೀನ್ ಗಳು
6. ಎಲ್ಲಾ ಜಿಲ್ಲೆಗಳಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
7. ಎಲ್ಲಾ ಜಿಲ್ಲೆಗಳ ಜಿಲ್ಲಾ ಸರ್ಜನ್ ಗಳು

ಮಾಹಿತಿಗಾಗಿ ಪ್ರತಿಗಳು:

1. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು
2. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
3. ಪೊಲೀಸ್ ಮಹಾ ನಿರ್ದೇಶಕರು, ಬೆಂಗಳೂರು
4. ಪ್ರಧಾನ ಕಾರ್ಯದರ್ಶಿ, ಡಿ.ಪಿ.ಎ.ಆರ್. ಬೆಂಗಳೂರು
5. ಪ್ರಧಾನ ಕಾರ್ಯದರ್ಶಿ, ಆರ್.ಡಿ.ಪಿ.ಆರ್. ಬೆಂಗಳೂರು
6. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ.
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
8. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಬೆಂಗಳೂರು.